ಅಪ್ಪನಿಲ್ಲದ ಮಾಳಿಗೆ ಮನೆಯಲ್ಲಿ ಕೂಡು ಕುಟುಂಬದ ಹಲವು ಹಿತಾಸಕ್ತಿಗಳ ತಾಕಲಾಟ ಸಹಜವಾಗಿ ಸಪ್ಪಳ ಮಾಡತೊಡಗಿತು. ಅಪ್ಪ ಬಳಸುತ್ತಿದ್ದ ಪಡಸಾಲೆಯ ಎದುರುಗೋಡೆ ಎಡಬದಿಯ ಕಪಾಟಿನ ಬೀಗ ಮುರಿದ ಹಿರಿಯ ಚಿಕ್ಕಪ್ಪ ಯಾಜಮಾನಿಕೆ ಸ್ಥಾಪಿಸಿದ. ಎರಡನೆಯ ಚಿಕ್ಕಪ್ಪನೂ ಅಧಿಕಾರದಾಟದಲ್ಲಿ ಹಿಂದೆ ಬೀಳದೆ ಬಲಗಡೆಯ ಕಪಾಟಿಗೆ ವಾರಸುದಾರನಾದ. ಕಣದಲ್ಲಿ ರಾಶಿ ಮಾಡಿದ್ದ, ಹಗೇವುಗಳಲ್ಲಿ ತುಂಬಿಸಿದ್ದ ದವಸಧಾನ್ಯಗಳನ್ನು ಮಾರಿ ಗಂಟು ಮಾಡಿಕೊಳ್ಳುವ ಸ್ಪರ್ಧೆ ಇಬ್ಬರೂ ಚಿಕ್ಕಪ್ಪಂದಿರ ನಡುವೆ. ಅಪಾರ ಕುತೂಹಲದ ಬಾಲಕ ಸಂ, ಯಾರಿಗೂ ಬೇಡವಾಗಿದ್ದ ಮಾಳಿಗೆ ಮೇಲಿನ ಪುಸ್ತಕರಾಶಿಯನ್ನು ಹೊಕ್ಕು ಮೇಯತೊಡಗಿದ್ದು ಯಾರ ಗಮನಕ್ಕೂ ಬರುವಂತಿರಲಿಲ್ಲ. ಕುವೆಂಪು, ಶಿವರಾಮ ಕಾರಂತರ ಕೃತಿಗಳ ನಡುವೆ ಹಸಿದವರಿಗಾಗಿ ಕಾದುಕುಳಿತಿದ್ದ ಕಮ್ಯುನಿಸ್ಟ್ ಸಾಹಿತ್ಯ ಬಾಲಕನಿಗೆ ವಿಶೇಷ ಆಹಾರ ಒದಗಿಸಿತು.

ಸಾಂಪ್ರದಾಯಿಕ ಉಳ್ಳಾಗಡ್ಡಿ, ಜೋಳ ಬೆಳೆಯುವ ಸಂದರ್ಭದಲ್ಲಿ ಹಳ್ಳದ ದಂಡೆಯ ಮೇಲೆ ವ್ಯವಸ್ಥಿತವಾಗಿ ಮಾವಿನ ತೋಟ ಕಟ್ಟಿದ್ದ ಅಪ್ಪನಿಗೆ ಪ್ರಗತಿಪರತೆಯ ಒರತೆ ದಕ್ಕಿದ್ದು ಬಹುಶಃ ಅನಂತಪುರ ಕಾಲೇಜಿನಲ್ಲಿ. ಸಾಹಿತ್ಯದ ಓದು, 30 ನಂಬರು ಬೀಡಿ, ಇಸ್ಪೀಟು ಆಟ, ಪಾರಿವಾಳ ಸಾಕುವುದು ಅಪ್ಪನ ಹವ್ಯಾಸಗಳಾಗಿದ್ದವು. ಒಬ್ಬ ಸಾಮಾನ್ಯ ಕೃಷಿಕನ ಸಹಜ ಬದುಕಿನ ಹಾದಿಯಲ್ಲೂ ಹೆಜ್ಜೆ ಗುರುತುಗಳು. ಅಪ್ಪ ಆಂಧ್ರದ ಅನಂತಪುರಕ್ಕೆ ಓದಲು ಹೋದಾಗ ಬಳಸಿದ್ದ ಟ್ರಂಕು, ಅಪ್ಪನ ಸಹಿ ಹೊತ್ತ ನೆಹರೂ ಅವರ 'ಭಾರತ ದರ್ಶನ' ಕೃತಿ ಇಂದಿಗೂ ಸಂ ಜೊತೆಗಿವೆ. ಅಪ್ಪನ ಟ್ರಂಕಿನಲ್ಲಿ ಈಗ ಅಮ್ಮ ಬಿಟ್ಟುಹೋದ ವಸ್ತುಗಳು, ನೆನಪುಗಳು ತುಂಬಿವೆ!

ಸಂ ಕೆಲವು ಸಂದರ್ಭಗಳಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ದಾಖಲಿಸುವ ನಿಷ್ಠುರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಆತ್ಮೀಯ ಹಿತೈಷಿಯೊಬ್ಬರು, 'ಸಂ ಸುಮ್ಮನಿರುವುದಿಲ್ಲ; ವಿನಾಕಾರಣ ಹುಳು

